



ಹೋಗಿದ್ದ. ನಾನು ಮತ್ತೊಮ್ಮೆ ಮೃದುಲ್‌ನನ್ನು ನೆನಪಿಸಿಕೊಂಡೆ. ಅವನು ಛತ್ತೀಸಗಢಕ್ಕೆ ಹೋಗದಿದ್ದರೆ, ತನ್ನ ಬೈಕ್‌ನಲ್ಲಿ ನನ್ನನ್ನು ನನ್ನ ಮನೆಗೆ ಬಿಡುತ್ತಿದ್ದ. ನಾನು ನನ್ನ ಮನೆಯ ಬಾಗಿಲ ಬಳಿಗೆ ಹೋದಾಗ, ಬೈಕ್‌ನಿಂದ ನಾನಿಳಿಯುತ್ತಲೇ ಮೃದುಲ್ ತನ್ನ ಬೈಕನ್ನು ಹೊರಳಿಸುತ್ತಿದ್ದ; ಸದಾ ಹೀಗೆಯೇ ಆಗುತ್ತಿತ್ತು.

'ದಯವಿಟ್ಟು ಕಾಫಿ ಕುಡಿದು ಹೋಗಿ'

ಮೃದುಲ್ ನನ್ನ ಈ ಆಗ್ರಹಕ್ಕೆ 'ಮತ್ತೆ ಯಾವಾಗಲಾದ್ರು, ಇವತ್ತು ಅರ್ಜೆಂಟ್‌ನಲ್ಲಿದ್ದೇನೆ' ಎನ್ನುತ್ತಿದ್ದ. ಯಾವ ಸ್ವಾರ್ಥವಿಲ್ಲದೆ ಸಹಕರಿಸುವ ಮೃದುಲನ ಈ ಗುಣ, ಅವನ ಬಗ್ಗೆ ನನ್ನ ಮನಸ್ಸಿನಲ್ಲಿ ಗೌರವವನ್ನು ಮೂಡಿಸುತ್ತಿತ್ತು. ತುಂತುರು ಮಳೆ ಈಗ ತೀವ್ರವಾಗುತ್ತಿತ್ತು. ಒಂದೇ ಸಮನೆ ಬೀಳುತ್ತಿದ್ದ ಹನಿಗಳಿಂದಾಗಿ ನಾನು ಒದ್ದೆಯಾಗಿದ್ದೆ. ಆ ಮಳೆ ಹನಿಗಳಿಂದಾಗಿ ನಡುಗುತ್ತಿದ್ದೆ, ಮೃದುಲನೊಂದಿಗೆ ಕಲೆತ ಯೋಚನೆಗಳ ಕೊಂಡಿ ಕಳಚಿತು. ಹಾಗಂತ ನಾನು ಬೇಗನೇ ಗಾಬರಿಗೊಳ್ಳುವುದಿಲ್ಲ. ಆದರೆ ಆಗ ನನ್ನ ಮನಸ್ಸು ಗಾಬರಿಗೊಂಡಿತ್ತು. ನಾನೀಗ ನಡೆದೇ ಮನೆಗೆ ಹೋಗಬೇಕೆಂದು ಯೋಚಿಸಿದೆ. ಈ ನಡುವೆ ಆಟೊ ಸಿಕ್ಕರೆ ಅದರಲ್ಲಿ ಹೋಗುವೆ. ಇಲ್ಲದಿದ್ದರೆ ನೆನೆದೇ ಮನೆಗೆ ಹೋಗುವೆ. ನಾನು ನನ್ನ ಯೋಚನೆಯನ್ನು ಕಾರ್ಯಗತಗೊಳಿಸಬೇಕೆಂದಿದ್ದೆ, ಆಗಲೇ ರಿತಿಕ್ ಬೈಕ್‌ನೊಂದಿಗೆ ಬಂದು ನನ್ನ ಬಳಿ ನಿಂತಿದ್ದ.

'ಎಲ್ಲಿಯವರೆಗೆ ಅಂತ ಆಟೊ ಕಾಯ್ತೀರ? ನಡೀರಿ, ನಾನು ನಿಮ್ಮನ್ನು ಮನೆಗೆ ಬಿಡ್ತೀನಿ'.

ನಾನು ಸ್ವಲ್ಪ ಹಿಂಜರಿದೆ. ನಂತರ ಏಕೆ ಒಪ್ಪಿದ್ದೆನೋ, ತಿಳಿಯದು. ಬಹುಶಃ ರಸ್ತೆ ಶೂನ್ಯವಾಗಿದ್ದರಿಂದ ಈ ನಿರ್ಧಾರಕ್ಕೆ ಬಂದನೇನೋ.

'ಬೇಡ, ನಾನು ಹೋಗ್ತೀನಿ', ನನ್ನ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾ ಹೇಳಿದ್ದೆ. ಆದರೆ ರಿತಿಕ್‌ನ ಈ ಪ್ರಸ್ತಾವ ಮೊದಲ ಬಾರಿಗೇ ನನ್ನಲ್ಲಿ ದುರಾಸೆಯನ್ನು ಹುಟ್ಟಿಸಿತ್ತು.

'ಹೆದ್ರ ಬೇಡಿ, ನಿಮ್ಮನ್ನು ನಿಮ್ಮ ಮನೆಗೇ ತಲುಪಿಸುತ್ತೇನೆ, ಬೇರೆಲ್ಲಿಗೂ ಅಲ್ಲ.'

'ಇಲ್ಲ ಇಲ್ಲ, ಹಾಗಲ್ಲ' ನಾನು ತಡಬಡಿಸಿದ್ದೆ. ಬಹುಶಃ ರಿತಿಕ್ ನನ್ನ ಮನಸ್ಸಿನಲ್ಲಿ ಮೂಡಿದ್ದ ಅಪನಂಬಿಕೆಯನ್ನು ಅರಿತಿದ್ದ.

'ಈ ಚಳಿಯಲ್ಲಿ, ಮಳೆಯಲ್ಲಿ ನೆನೆಯುತ್ತಾ ಹೋಗ್ತೀರ? ಹಾಗಂತ ನಿಮ್ಮ ಯೋಚನೆ ಕೆಡುಕೇನಲ್ಲ, ನಾಳೆ ಸ್ವಲ್ಪ ಸೀನುಗಳು ಬರಬಹುದು, ಸ್ವಲ್ಪ ಜ್ವರ ಬರಬಹುದು... ಹೋಗ್ಲಿ ಬಿಡಿ. ನೀವು ಈ ಎಲ್ಲಾ ಸಮಸ್ಯೆಗಳಿಂದ ಪಾರಾಗಬೇಕೆಂದಿದ್ದರೆ, ನನಗೆ ನಿಮ್ಮ ಸೇವೆ ಮಾಡುವ ಅವಕಾಶವನ್ನು ನೀವು ಕೊಡಬಲ್ಲಿರಿ', ರಿತಿಕ್ ನಾಟಕೀಯವಾಗಿ ಹೇಳಿದ್ದ. ನನಗೆ ರಿತಿಕ್‌ನ ಆ ನಾಟಕೀಯತೆಯಲ್ಲಿಯೂ ಆಕರ್ಷಣೆಯೊಂದು ಕಂಡಿತು.

ಗಾಳಿ ವೇಗವಾಗಿತ್ತು. ಈಗ ದೊಡ್ಡದೊಡ್ಡ ಹನಿಗಳು ಬೀಳುತ್ತಿದ್ದವು. ಆದರೆ ರಿತಿಕ್, ಮೃದುಲನಂತೆ ಪರಿಚಿತನಾಗಿರಲಿಲ್ಲ. ಅವನು ಅಪರಿಚಿತನಾಗಿದ್ದ. ಒಂದು ಸಹಜ ಹಿಂಜರಿಕೆ ನನ್ನನ್ನು ಪದೇ ಪದೇ ತಡೆಯುತ್ತಿತ್ತು. ಬಹುಶಃ ರಿತಿಕ್ ನನ್ನ ಈ ಅಸಹಾಯಕತೆಯನ್ನು ಸಹ ಓದಿದ.

'ಈ ಅಪರಿಚಿತನೊಂದಿಗೆ ಹೇಗೆ ಹೋಗಲಿ ಎಂದು ನೀವು ಯೋಚಿಸುತ್ತಿರಬೇಕು ಅಲ್ವಾ? ಹಾಗಾದ್ರೆ ನನ್ನ ಪರಿಚಯ ನಿಮಗೆ ಹೇಳಿ ಬಿಡ್ತೀನಿ. ನನ್ನ ಹೆಸರು ರಿತಿಕ್. ಆದರೆ ನನ್ನ ತಂದೆಯ ಹೆಸರು ರಾಕೇಶ್ ರೋಶನ್ ಅಲ್ಲ!' ರಿತಿಕ್ ನಕ್ಕಿದ್ದ.

'ನಿಜ ಹೇಳಬೇಕೆಂದರೆ ನಾನು ರಿತಿಕ್ ಶರ್ಮಾ', ರಿತಿಕ್ ನಗುತ್ತಾ ಮತ್ತೆ ಹೇಳಿದ್ದ.

'ನೀವು ಯಾವ ಕೆಲಸದಲ್ಲಿದ್ದೀರ?' ನಾನು ತಿಳಿಯಲು ಬಯಸಿದೆ. ಹೆಸರು ತಿಳಿಯುವುದು ಪರ್ಯಾಪ್ತವಾಗಿರಲಿಲ್ಲ.

'ನಿಮ್ಮ ಸೇವೆ ಮಾಡುವ ಕೆಲಸ', ರಿತಿಕ್ ಮತ್ತೆ ನಕ್ಕು ಹೇಳಿದ್ದ.

'ನಿಮ್ಮ ಸೇವೆಯ ನಂತರ ಉಳಿದ ಸಮಯದಲ್ಲಿ ನೌಕರಿ ಮಾಡ್ತೀನಿ. ಅಲ್ಲಿ ದೊಡ್ಡ ಫೌಂಟೇನ್ ಇದೆಯೆಲ್ಲ, ಅದರ ಬಲಗಡೆಗಿರುವ ದೊಡ್ಡ ಬಿಲ್ಡಿಂಗ್‌ನಲ್ಲಿ ನನ್ನ ದೊಡ್ಡ ಕಚೇರಿಯಿದೆ. ಮಲ್ಟಿನ್ಯಾಷನಲ್ ಕಂಪನಿ ಅಲ್ವಾ?' ರಿತಿಕ್ ಒಂದೇ ಉಸಿರಿನಲ್ಲಿ ಹೇಳಿದ್ದ.

'ನೀವು ಇಲ್ಲಿಯವರೇ?' ನನ್ನ ಅಭಿಪ್ರಾಯ ನಗರವೆಂದಾಗಿತ್ತು.

'ಹೌದು, ಇದೇ ಜಗತ್ತಿನವನು' ರಿತಿಕ್ ಮತ್ತೆ ನಕ್ಕಿದ್ದ.

'ಲಿಫ್ಟ್‌ಗೆ ಇಷ್ಟು ಸಾಕಲ್ವಾ? ಈಗ ನೀವು ನನ್ನೊಂದಿಗೆ ಬರಬಹುದು? ನೀವು ಹೀಗೆ ಇಲ್ಲಿಯೇ ನಿಂತು ನನ್ನ ಇಂಟರ್‌ವ್ಯೂ ತೆಗೆದುಕೊಳ್ಳುತ್ತಿದ್ದರೆ, ಇನ್ನು ಕೆಲವೇ ಕ್ಷಣಗಳಲ್ಲಿ ನಾವಿಬ್ಬರೂ ತೊಯ್ದು ಹೋಗ್ತೀವಿ, ನಾಳೆ ಸೀನುಗಳು ಬರುತ್ತವೆ, ನಂತರ ಜ್ವರ ಬರುತ್ತೆ.'

ರಿತಿಕ್‌ನ ಈ ತಮಾಷೆಗೆ ನಾನು ನಗದಿರಲು ಸಾಧ್ಯವಾಗಲಿಲ್ಲ. ನಕ್ಕ ನಂತರ, ನಾನು ಇಂಥ ಉನ್ಮುಕ್ತ ನಗೆಯನ್ನು ನಗದೆ ಅದೆಷ್ಟು ದಿನಗಳಾದವೋ ಎಂದು ಅನ್ನಿಸಿತು. ನಾನು ರಿತಿಕ್‌ನ ಬೈಕ್‌ನ ಹಿಂಭಾಗದಲ್ಲಿ ಕೂತೆ. ಬೈಕ್‌ನ ಸೀಟ್ ಫುಟ್ ಸ್ಟೆಪ್‌ನ ಮೇಲೆ ಕಾಲೂರಿದ ನಂತರ ನಾನು ರಿತಿಕ್‌ನ ಹೆಗಲನ್ನು ಹಿಡಿದುಕೊಳ್ಳಬೇಕಾಯಿತು. ಆಗ ನನಗೆ ಸಂಕೋಚದ ಅನುಭವವಾಯಿತು, ಆದರೆ ರಿತಿಕ್ ಸಹಜವಾಗಿದ್ದ. ಅವನು ನನ್ನನ್ನು ಆದಷ್ಟು ಬೇಗ ನನ್ನ ಮನೆಗೆ ತಲುಪಿಸಲು ಬಯಸುತ್ತಿದ್ದ. ಇದೊಂದು ಸಾಮಾನ್ಯ ಸಂಗತಿಯಾಗಿತ್ತು, ಆದರೂ ನೇರ ಸಂಗತಿಯಾಗಿರಲಿಲ್ಲ. ಸಂಬಂಧಗಳು ಎಂದೂ ನೇರವಾಗಿರುವುದಿಲ್ಲ.

ರಿತಿಕ್ ಒಮ್ಮೆಯೂ ನನ್ನ ಮನೆಯ ದಾರಿಯನ್ನು ಕೇಳಲಿಲ್ಲ. ಅವನು ನನ್ನನ್ನು ಹಿಂಬಾಲಿಸಿ, ನನ್ನ ಮನೆಯ ವಿಳಾಸವನ್ನು ಈ ಮೊದಲೇ ತಿಳಿದಿದ್ದಾನೆ ಎಂದು ತಿಳಿದೆ. ರಿತಿಕ್ ಎಷ್ಟು ಬಾರಿ ಹಿಂಬಾಲಿಸಿರಬೇಕು? ಯುವತಿಯೊಬ್ಬಳನ್ನು ಹಿಂಬಾಲಿಸುವುದು ಸರಿಯಲ್ಲ. ಇವನು ನೀಚನೇ? ಆದರೆ ಹಾಗೆನಿಸುವುದಿಲ್ಲ. ನನ್ನ ಮನಸ್ಸಿನಲ್ಲಿ ರಿತಿಕ್ ಬಗ್ಗೆ ಪ್ರಶ್ನೋತ್ತರಗಳು ಏರಿಳಿಯುತ್ತಿದ್ದವು.

ರಿತಿಕ್ ನನ್ನ ಮನೆ ಎದುರು ಬಂದು ಬೈಕ್ ನಿಲ್ಲಿಸಿದ.

'ನೋಡಿ, ನಿಮ್ಮ ಮನೆ ಬಂತು' ಎಂದಿದ್ದ ರಿತಿಕ್.

'ಓಹ್, ಹೌದು' ನನಗೆ ಆಶ್ಚರ್ಯವಾಗಿತ್ತು. ಏಕೆ? ಗೊತ್ತಿಲ್ಲ. ಕೆಲವು ಯೋಚನೆಗಳು ಏಕೆ ಉದ್ಭವವಾಗುತ್ತವೆಯೋ, ತಿಳಿಯುವುದಿಲ್ಲ. ನಾನು ಬೈಕಿನಿಂದಿಳಿದು ನಿಂತೆ.

'ಥ್ಯಾಂಕ್ ಯೂ' ಎಂದು ಹೇಳಿದೆ.

'ಇಟ್ಸ್ ಓಕೆ', ರಿತಿಕ್ ತನ್ನ ಬೈಕನ್ನು ಹೊರಳಿಸಿದ. ಅವನು ನಿಲ್ಲಲಿಲ್ಲ. ಹೊರಟು ಹೋದ. ನಾನು ಅವನೊಂದು ಕಪ್ ಚಹಾ ಅಥವಾ ಕಾಫಿಯನ್ನು ಯಾಚಿಸಬಹುದೆಂದು ಆಶಿಸುತ್ತಿದ್ದೆ. ಆದರೆ ಅವನು ಯಾಚಿಸಲಿಲ್ಲ. ನನಗೆ ಆಶ್ಚರ್ಯವಾಯಿತು. ನನಗೆ ಮೃದುಲ್ ಮತ್ತೆ ನೆನಪಾದ, ಆದರೆ ಕ್ಷಣ ಮಾತ್ರ; ನಂತರ ಮೃದುಲನ ಮಂದ ರೂಪದೆದುರು ರಿತಿಕ್‌ನ ರೂಪ ಅನಾಯಾಸವಾಗಿ ಮೂಡಿ ದಟ್ಟವಾಯಿತು.

(ಸಶೇಷ)